| ಓ ಎಸ್ | 210/2022 | ಪಿ.ಡಬ್ಲ್ಯೂಃ 1 |
|---|---|---|

ಇಂದು ದಿಃ 16.08.2023 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 5 ಮತ್ತು 6 ನೇ ಪ್ರತಿವಾದಿಗಳ ಪರ ಶ್ರೀ ಕೆ ಎಸ್ ಎನ್ ವಕೀಲರಿಂದಃ-

ನಾನು ಮರಪ್ಪನವರ ಮಗಳು ರತ್ನಮ್ಮನವರ ಮಗ ಎಂದರೆ ಸರಿ. ನನ್ನ ತಾಯಿ 1962 ರಲ್ಲಿ ತೀರಿಹೋಗಿದ್ದಾರೆ. ನನ್ನ ತಾಯಿಯ ತಂದೆ ಮರಪ್ಪ ಮತ್ತು ತಾಯಿಯ ತಾಯಿ ಸಣ್ಣಮ್ಮ 2003 ರಲ್ಲಿ ತೀರಿಹೋಗಿದ್ದಾರೆ. ನನ್ನ ತಾಯಿಯ ಅಕ್ಕ ಪುಟ್ಟತಾಯಮ್ಮ 2013 ರಲ್ಲಿ ತೀರಿಹೋಗಿದ್ದಾರೆ. ನನ್ನ ತಾಯಿಯ ತಂಗಿ ಮಂಗಳಮ್ಮ 2021 ರಲ್ಲಿ ತೀರಿಹೋಗಿದ್ದಾರೆ. ನನ್ನ ತಾಯಿಯ ತಮ್ಮ ಬಸವರಾಜು ಅಂದರೆ 1 ನೇ ಪ್ರತಿವಾದಿಯ ಗಂಡ ಮತ್ತು 2 ನೇ ಪ್ರತಿವಾದಿಯ ತಂದೆ 2004 ರಲ್ಲಿ ತೀರಿಹೋಗಿದ್ದಾರೆ. ನನ್ನ ತಾಯಿಯ ತಂಗಿ ಶಿವಮ್ಮ ಅಂದರೆ 13 ನೇ ವಾದಿ ಬದುಕಿದ್ದಾರೆ. ಅವರಿಗೆ ಈಗ ಸುಮಾರು 75-80 ವರ್ಷ ವಯಸ್ಸಾಗಿದೆ ಎಂದರೆ ಇರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಶಿವಮ್ಮನವರಿಗೆ ಮದುವೆ ಆಗಿದೆ ಎಂದರೆ ಸರಿ. ಮರಪ್ಪನವರು ಬದುಕಿದ್ದಾಗಲೇ ಅವರ ಎಲ್ಲಾ ಹೆಣ್ಣು ಮಕ್ಕಳಿಗೂ ಮದುವೆ ಮಾಡಿದ್ದು, ಮದುವೆಯನ್ನು ಮರಪ್ಪ ಮತ್ತು 1 ನೇ ಪ್ರತಿವಾದಿಯ ಗಂಡ ಬಸವರಾಜು ಮಾಡಿದ್ದರು ಎಂದರೆ ಸರಿ. ಪುಟ್ಟತಾಯಮ್ಮನವರಿಗೆ ಮದುವೆ ಆಗಿ ಸುಮಾರು 40 ವರ್ಷಗಳಾಗಿವೆ ಎಂದರೆ ಸರಿ. ಮರಪ್ಪನವರ ಎಲ್ಲಾ ಹೆಣ್ಣು ಮಕ್ಕಳ ಮದುವೆ 45-50 ವರ್ಷಗಳ ಹಿಂದೆ ಆಗಿತ್ತು ಎಂದರೆ ಸರಿ. ಮದುವೆ ಸಮಯದಲ್ಲಿ ಕೊಡಬೇಕಾದ ಎಲ್ಲವನ್ನೂ ಎಲ್ಲಾ ಹೆಣ್ಣು ಮಕ್ಕಳಿಗೂ ಕೊಟ್ಟು ಮರಪ್ಪ ಮತ್ತು ಬಸವರಾಜು ಮದುವೆ ಮಾಡಿದ್ದರು ಎಂದರೆ ಸುಳ್ಳು. ಮದುವೆ ಆದ ನಂತರ ಎಲ್ಲಾ ಹೆಣ್ಣು ಮಕ್ಕಳು ಅವರವರ ಗಂಡನ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ.

ಮರಪ್ಪನವರಿಗೆ ಒಬ್ಬನೇ ಗಂಡು ಮಗ ಬಸವರಾಜು ಎಂದರೆ ಸರಿ. ಉಳಿದವರೆಲ್ಲರೂ ಹೆಣ್ಣು ಮಕ್ಕಳು ಎಂದರೆ ಸರಿ. ಎಲ್ಲಾ ಹೆಣ್ಣು ಮಕ್ಕಳಿಗೂ ಕೊಡಬೇಕಾದ ಎಲ್ಲವನ್ನು ಕೊಟ್ಟು ಮದುವೆಯನ್ನು ಮರಪ್ಪ ಮತ್ತು ಬಸವರಾಜು ಮಾಡಿದ್ದ ಕಾರಣ ಹೆಣ್ಣು ಮಕ್ಕಳು ಖಾತೆ ಬದಲಾವಣೆಗೆ ಸಮ್ಮತಿ ನೀಡಿದ್ದರು ಎಂದರೆ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ಹೆಣ್ಣು ಮಕ್ಕಳು ಸಮ್ಮತಿ ಕೊಟ್ಟ ಕಾರಣದಿಂದ ಬಸವರಾಜು ತನ್ನ ಹೆಸರಿಗೆ ದಾವಾ ಆಸ್ತಿಗಳ ಖಾತೆ ಮಾಡಿಸಿಕೊಂಡು ಅವರು ತೀರಿಹೋಗುವವರೆಗೂ ದಾವಾ ಆಸ್ತಿಗಳ ಸ್ವಾಧೀನಾನುಭವದಲ್ಲಿದ್ದರು ಎಂದರೆ ಸುಳ್ಳು. ಬಸವರಾಜುರವರ ಮರಣಾನಂತರ ಅವರ ಹೆಂಡತಿ ಮತ್ತು ಮಗ ಅಂದರೆ 1 ಮತ್ತು 2 ನೇ ಪ್ರತಿವಾದಿಗಳು ತಮ್ಮ ಹೆಸರಿಗೆ ದಾವಾ ಆಸ್ತಿಗಳ ಖಾತೆ ಮಾಡಿಸಿಕೊಂಡು ದಾವಾ ಆಸ್ತಿಗಳ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಇದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ.  ನಾವು ವಾದಿಗಳು ದಾವಾ ಆಸ್ತಿಗಳ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿ.

ಒಂದು ಮತ್ತು 2 ನೇ ಪ್ರತಿವಾದಿಗಳು ತಮ್ಮ ಕುಟುಂಬದ ದರ್ದು ನಿಮಿತ್ತ ದಾವಾ ಅನುಸೂಚಿಯ 6 ನೇ ಸ್ವತ್ತನ್ನು 5 ನೇ ಪ್ರತಿವಾದಿಗೆ ದಿಃ05.12.2005 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದರು  ಎಂದರೆ ನಮಗೆ ಗೊತ್ತಿಲ್ಲ . ಕ್ರಯಪತ್ರವಾದ ದಿನದಿಂದಲೇ  5 ನೇ ಪ್ರತಿವಾದಿ ಸದರಿ ಸ್ವತ್ತಿನ ಸ್ವಾಧೀನಕ್ಕೆ ಬಂದು 2007 ರವರೆಗೆ ಅವರೇ ಸದರಿ ಸ್ವತ್ತಿನ ಸ್ವಾಧೀನದಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ.  ಐದನೆ ಪ್ರತಿವಾದಿಗ ತಮ್ಮ ಕುಟುಂಬದ ದರ್ದ್ದು ನಿಮಿತ್ತ ಸದರಿ ಸ್ವತ್ತನ್ನು ದಿಃ21.03.2007 ರಂದು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. 2007 ರಿಂದ ದಾವಾ ಅನುಸೂಚಿಯ 6 ನೇ ಸ್ವತ್ತಿನ ಖಾತೆಯನ್ನು 6 ನೇ ಪ್ರತಿವಾದಿ ತನ್ನ ಹೆಸರಿಗೇ ಮಾಡಿಸಿಕೊಂಡು ಈವರೆಗೂ ಅವರೇ ಶಾಂತಿಯುತ ಸ್ವಾಧೀನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದು ನಾನೇ ಖುದ್ದಾಗಿ ನನ್ನ ವಕೀಲರ ಬಳಿ ಹೇಳಿ ಅವರನ್ನು 5 ಮತ್ತು 6 ನೆ ಪ್ರತಿವಾದಿಗಳನ್ನಾಗಿ ಮಾಡಿದ್ದೇನೆ ಎಂದರೆ ಸಾಕ್ಷಿಯು ನಮ್ಮ ತಾತನ ಆಸ್ತಿ ಅವರು ಖರೀದಿಸಿದ ವಿಚಾರ ಗೊತ್ತಿರಲಿಲ್ಲ, ಇತ್ತೀಚೆಗೆ ತಿಳಿದ ನಂತರ ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ.  1 ಮತ್ತು 2 ನೆ ಪ್ರತಿವಾದಿಗಳು ದಾವಾ ಅನುಸೂಚಿಯ 6 ನೆ ಸ್ವತ್ತನ್ನು 5 ನೇ ಪ್ರತಿವಾದಿಗೆ  ಮಾರಾಟ ಮಾಡಿ 20 ವರ್ಷಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ.

| | | |
|---|---|---|
| ಓ ಎಸ್ | 210/2022 | ಪಿ.ಡಬ್ಲ್ಯೂ 1 |

ಸುಮಾರು 20 ವರ್ಷಗಳಿಂದ 5 ಮತ್ತು 6 ನೇ ಪ್ರತಿವಾದಿಗಳೇ ದಾವಾ ಅನುಸೂಚಿಯ 6 ನೇ ಸ್ವತ್ತಿನ ಸ್ವಾಧೀನದಲ್ಲಿರುವುರಿಂದ ಸದರಿ ಸ್ವತ್ತಿನಲ್ಲಿ ನಮಗೆ ವಿಭಾಗದ ಹಕ್ಕು ಇಲ್ಲ ಎಂದರೆ ಸಾಕ್ಷಿಯು ನಮ್ಮ ತಾತನ ಆಸ್ತಿ ಆದ ಕಾರಣ ನಾವು ಬೇಕು ಎಂದು ಕೇಳುತ್ತಿದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ.

ಒಂದನೇ ಪ್ರತಿವಾದಿಯ ಗಂಡ ಬಸವರಾಜುರವರು ಬದುಕಿದ್ದಾಗಲೇ ಎಲ್ಲಾ ಹೆಣ್ಣುಮಕ್ಕಳ ಸಮ್ಮತಿಯ ಮೇರೆಗೆ ಖಾತೆ ಬದಲಾವಣೆ ಮಾಡಿಸಿಕೊಂಡ ಕಾರಣ ನಮಗೆ ದಾವಾ ಸ್ವತ್ತಗಳಲ್ಲಿ  ಭಾಗ ಕೇಳಲು ಹಕ್ಕು ಇಲ್ಲ ಎಂದರೆ ಸರಿಯಲ್ಲ.  ಪುಟ್ಟತಾಯಮ್ಮ, ರತ್ನಮ್ಮ ಮತತು ಮಂಗಳಮ್ಮ ಬಹಳ ವರ್ಷಗಳ ಹಿಂದೆಯೇ ತೀರಿಹೋದ ಕಾರಣ ಅವರ ವಾರಸುದಾರರಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.  ಮರಪ್ಪ ಮತ್ತು ಬಸವರಾಜುವರು ಬದುಕಿದ್ದಾಗಲೇ ಎಲ್ಲಾ ಹೆಣ್ಣು ಮಕ್ಕಳಿಗೂ ವಿವಾಹ ಮಾಡಿ ಅವರ ಹಿಸ್ಸೆಗೆ ಬರುವಂತಹದ್ದನ್ನು ಚರ ರೂಪದಲ್ಲಿ ಕೊಟ್ಟ ಕಾರಣ ನಮಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಹಾಗೂ ಈ ದಾವೆ ಕಾಲಪರಿಮಿತಿಯೊಳಗೆ ಇಲ್ಲ ಎಂದರೆ ಸರಿಯಲ್ಲ.

ಆರನೇ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ 6 ನೇ ಪ್ರತಿವಾದಿ ಸದ್ಭಾವನಾ ಖರೀದಿದಾರರಾಗಿರುವುದರಿಂದ ಆ ದಾವಾ ಸ್ವತ್ತಿಗೇ ಸಂಬಂಧಪಟ್ಟಂತೆ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.